- ಅದೇ ರೀತಿಯಲ್ಲಿ ಹೆಚ್‌ಐವಿ ಸೋಂಕಿನೊಂದಿಗೆ ಜೀವಿಸುತ್ತಿರುವ ಮಕ್ಕಳಿಗಾಗಿ (15 ವರ್ಷಕ್ಕಿಂತ ಕೆಳಗಿನವರು) ಪ್ರಥಮ ಬಾರಿಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಎಆರ್‌ಟಿ ಚಿಕಿತ್ಸೆ ಪ್ರಾರಂಭಿಸಲಾಗಿದೆ ಬರುವ ದಿನಗಳಲ್ಲಿ ಎಲ್ಲಾ ಎಆರ್‌ಟಿ ಕೇಂದ್ರಗಳಲ್ಲೂ ಈ ಸೇವೆಯನ್ನು ವಿಸ್ತರಿಸಲಾಗುವುದು ನ್ಯಾಕೋ ಮುಖಾಂತರ ಕ್ಲಿಂಟನ್ ಫೌಂಡೇಷನ್‌ನವರು ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ ಯುನಿಸೆಫ್‌ನವರು ವಿವಿಧ ಹಂತಗಳಲ್ಲಿ ತರಬೇತಿ ನೀಡಲು ಸಹಾಯ ಮಾಡುತ್ತಿದ್ದಾರೆ
- ಹಾಗೆಯೇ ವಿಭಾಗೀಯ ಮಟ್ಟದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೋಂಕಿತ ಮಕ್ಕಳಿಗಾಗಿ ಆರೈಕೆ ಮತ್ತು ಬೆಂಬಲ (ಎ ಆರ್ ಟಿ ಚಿಕಿತ್ಸೆ) ನೀಡುವ ಸೆಂಟರ್ ಆಫ್ ಎಕ್ಸೆಲೆನ್ಸ್ ಸಂಸ್ಥೆಯನ್ನು ತೆರೆಯಲು ನ್ಯಾಕೋದಿಂದ ಮಂಜೂರಾತಿ ದೊರೆತಿದೆ
- ಇವುಗಳ ಜೊತೆಗೆ ಸುರಕ್ಷಿತ ಕ್ರಮವಾಗಿ ಕಾಂಡೋಮ್ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಕಾಂಡೋಮ್ ಬಳಕೆ ಕೇವಲ ಸಂತಾನ ನಿಯಂತ್ರಣ ಸಾಧನವಾಗಿರದೇ HIV/AIDS ನಿಯಂತ್ರಣ ಸಾಧನವಾಗಿ ಉಪಯೋಗಿಸಬಹುದೆಂದು ಜನತೆಯಲ್ಲಿ ಅರಿವು ಮೂಡಿಸಲಾಗುತ್ತಿದೆ ಹಾಗೆಯೇ ನಿರೋಧ್‌ಗಳನ್ನು ವಿತರಿಸಲಾಗುತ್ತಿದೆ
- "ಅರಿವೇ ಗುರು" ಎಂಬಂತೆ, ಅರಿವು ಹಾಗೂ ಸೂಕ್ತ ಎಚ್ಚರಿಕೆಯೊಂದೇ ಏಡ್ಸ್‌ನ್ನು ತಡೆಗಟ್ಟಬಲ್ಲದು ಎಂಬ ಉದ್ದೇಶದಿಂದ ರಾಜ್ಯಾದ್ಯಾಂತ ವಿವಿಧ ಮಾಧ್ಯಮಗಳ ಮೂಲಕ HIV/AIDS ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸಹ ತುಂಬಾ ತೀವ್ರವಾಗಿ ಕೈಗೊಳ್ಳಲಾಗಿದೆ

582 (882) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗ ಹಾಗೂ ದುರ್ಬಲ ವರ್ಗದವರಿಗೆ ಒಳ ಮೀಸಲಾತಿ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸರ್ಕಾರದಲ್ಲಿರುವ ಅಂಕಿಅಂಶಗಳೇನು, (ಜಾತಿವಾರು ವಿವರ ಒದಗಿಸುವುದು)?

ಇ) ಸರ್ಕಾರ ಈ ವಿಚಾರದಲ್ಲಿ ಇದುವರೆಗೆ ಕೈಗೊಂಡಿರುವ ಕ್ರಮಗಳೇನು?

ಈ) ಸರ್ಕಾರ ಒಳ ಮೀಸಲಾತಿಯನ್ನು ಜಾರಿಗೊಳಿಸುವುದು ಯಾವಾಗ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ವಿಷಯವು ಪರಿಶೀಲನೆಯಲ್ಲಿದೆ

ಆ) ಪರಿಶೀಲನೆಯ ನಂತರ ಮಾಹಿತಿ ಲಭ್ಯವಾಗುವುದು

ಇ) ಉದ್ಭವಿಸುವುದಿಲ್ಲ

ಈ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸದ್ಯದಲ್ಲೇ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಲಿದ್ದು, ನೇಮಕವಾದ ನಂತರ ಆಯೋಗವು ಸಲ್ಲಿಸುವ ವರದಿಯ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು

583 (892) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ನೇರ ಸಾಲ ಯೋಜನೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಯೋಜನೆ ಸ್ಥಗಿತಗೊಳ್ಳಲು ಕಾರಣವೇನು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 2006ರಲ್ಲಿ ಎಷ್ಟು ಸಾಲ ನೀಡಲಾಗಿದೆ?

ಇ) ಈ ನಿಗಮದಲ್ಲಿ ಸಾಲ ವಸೂಲಾತಿ ನಿರೀಕ್ಷಣ ಮಟ್ಟದಲ್ಲಿಲ್ಲದಿರುವುದು ನಿಜವೆ, ಇದೇ ಮಟ್ಟ ಮುಂದುವರಿದಲ್ಲಿ ನೈಜ ಫಲಾನುಭವಿಗಳಿಗೆ ತೊಂದರೆ ಯಾಗುವುದಿಲ್ಲವೆ?

ಈ) ಹಾಗಿದ್ದಲ್ಲಿ, ಸರ್ಕಾರ ನೇರ ಸಾಲ ಯೋಜನೆಯನ್ನು ಪುನರಾರಂಭಿಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ನೇರ ಸಾಲ ಯೋಜನೆ ಸ್ಥಗಿತಗೊಂಡಿರುವುದಿಲ್ಲ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮ ಹಾಗೂ ರಾಷ್ಟ್ರೀಯ ಪರಿಶಿಷ್ಟ ವರ್ಗಗಳ ಹಣಕಾಸು ಅಭಿವೃದ್ಧಿ ನಿಗಮಗಳಿಂದ ಅವಧಿಸಾಲ ಪಡೆದು ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ